# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್ ಆರ್ ಟಿ.ಎಸ್ ಆರ್: 71/2016-17**

**ದಿನಾಂಕ : 25 -10-2016.**

ಉಪಸ್ಥಿತರು : ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶ್ರೀ ಸುರೇಶ ಕೋಟ್ಯಾನ್,<br>ಬಿನ್ ಚೆನ್ನಪ್ಪ ಪೂಜಾರಿ,<br>ಕೊಡ್ಯೊಲು ಮನೆ,<br>ಮಾಲಾಡಿ ಗ್ರಾಮ,<br>ಬೆಳ್ತಂಗಡಿ ತಾಲೂಕು, ದ.ಕ.<br>(ನ್ಯಾಯವಾದಿ ಶ್ರೀ ಮನೋಹರ ಕುಮಾರ್ ಎ.) | --ಮತ್ತು - | ತಹಶೀಲ್ದಾರರು,<br>ಬೆಳ್ತಂಗಡಿ ತಾಲೂಕು. |

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಬೆಳ್ತಂಗಡಿ ತಾಲೂಕು ಮಾಲಾಡಿ ಗ್ರಾಮದ ನಂಬ್ರ MRH 65/2014-15, ದಿ: 30-12-2014ರ ಮ್ಯುಟೇಷನ್ ಆದೇಶ ಮತ್ತು ನಂಬ್ರ RRT.CR 476/15-16, ದಿನಾಂಕ: 19-3-2016 ರಂತೆ ತಹಶೀಲ್ದಾರರು, ಬೆಳ್ತಂಗಡಿ ರವರು ನೀಡಿದ ಹಿಂಬರಹ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಅಪೀಲಿನ ಸಾರಾಂಶ :-

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು, ಮಾಲಾಡಿ ಗ್ರಾಮದ ಸ.ನಂ. 27/3ಡಿ1 ರಲ್ಲಿ 0-20 ಎಕ್ರೆ, 28-2 ರಲ್ಲಿ 0-08.75 ಎಕ್ರೆ (ಭೂ.ಪ.) ಜಮೀನು , 28-2 ರಲ್ಲಿ 0-01.25 ಎಕ್ರೆ ಜಮೀನು ಬೆಳ್ತಂಗಡಿ ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯದ ಒ.ಎಸ್. ನಂಬ್ರ 376/1999 , ದಿನಾಂಕ: 16-10-1999 ರಂತೆ ಡಿಕ್ರಿಯಂತೆ ಜಮೀನು ಅರ್ಜಿಸಿದ್ದು, ಈ ಜಮೀನಿನ ಖಾತೆ/ಪಹಣಿ ದಾಖಲೆಯು ಮಾಲಾಡಿ ಗ್ರಾಮದ ನಂಬ್ರ ಎಂ.ಆರ್.ಹೆಚ್.65/2014-15, ದಿನಾಂಕ: 30-12-2014 ರಂತೆ ಅಪೀಲುದಾರರ ಹೆಸರಲ್ಲಿ ದಾಖಲಾಗಿರುತ್ತದೆ. ಹೀಗೆ ಮ್ಯುಟೇಷನ್ ಆದೇಶವಾಗಿ ಪಹಣಿ ದಾಖಲಾಗುವಾಗ ಅಪೀಲುದಾರರ ತಂದೆಯ ಹೆಸರು ಚೆನ್ನಪ್ಪ ಪೂಜಾರಿ ಎಂದು ನಮೂದಿಸುವ ಬದಲು ಜಿನ್ನಪ್ಪ ಪೂಜಾರಿ ಎಂದು ತಪ್ಪಾಗಿ ದಾಖಲು ಮಾಡಿರುತ್ತಾರೆ. ಇದನ್ನು ಸರಿಪಡಿಸುವಂತೆ ಪ್ರತಿವಾದಿಯವರಿಗೆ ಅರ್ಜಿ ಸಲ್ಲಿಸಿದಾಗ ಈಗಾಗಲೇ MRH 65/2014-15, ದಿ: 30-12-2014ರಂತೆ ಮ್ಯುಟೇಷನ್ ಪ್ರಕ್ರಿಯೆ ನಡೆದು ಪಹಣಿ ದಾಖಲಾದ ಕಾರಣ ಪುನ: ತಿದ್ದುಪಡಿಗೆ ಅವಕಾಶ ಇರುವುದಿಲ್ಲ. ಆದ್ದರಿಂದ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆಯುವಂತೆ ಸೂಚಿಸಿ ಹಿಂಬರಹ ನೀಡಿರುವುದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 26-7-2016 ರಂದು ಹಾಜರಾಗುವಂತೆ ನೋಟೀಸು ನೀಡಿ ಈ ದಿನವೇ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯ್ತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ, ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಪ್ರತಿವಾದಿಯವರು ಮ್ಯುಟೇಷನ್ ಪ್ರಕ್ರಿಯೆ ನಡೆಸಿ ಪಹಣಿ ದಾಖಲಾತಿ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಅಪೀಲುದಾರರ ತಂದೆಯ ಹೆಸರನ್ನು ಚೆನ್ನಪ್ಪ ಪೂಜಾರಿ ಎಂಬುದರ ಬದಲು ಜಿನ್ನಪ್ಪ ಪೂಜಾರಿ ಎಂಬುದಾಗಿ ತಪ್ಪಾಗಿ ದಾಖಲಿಸಿ ತೊಂದರೆ ಉಂಟು ಮಾಡಿದ್ದಾರೆ. ಅದನ್ನು ಸರಿಪಡಿಸಿ ಕೊಡಲು ಕೋರಿದಾಗ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿರುತ್ತಾರೆ. ಸಿವಿಲ್ ನ್ಯಾಯಾಲಯದ ಕೋರ್ಟು ಡಿಕ್ರಿಯಲ್ಲಿ ಅಪೀಲುದಾರರ ತಂದೆಯ ಹೆಸರು ಚೆನ್ನಪ್ಪ ಪೂಜಾರಿ ಎಂದು ಸ್ಪಷ್ಟವಾಗಿದ್ದು, ಡಾಟಾ ಎಂಟ್ರಿ ಸಂದರ್ಭದಲ್ಲಿ ಪ್ರತಿವಾದಿಯು ತಪಾವತು ಮಾಡಿದ್ದು, ಇದನ್ನು ಸರಿಪಡಿಸುವುದು ಸದ್ರಿಯವರ ಕರ್ತವ್ಯ ವಾಗಿರುತ್ತದೆ. ಆದ್ದರಿಂದ ಪಹಣಿ ದಾಖಲಾತಿಯಲ್ಲಿ ಅಪೀಲುದಾರರ ತಂದೆ ಹೆಸರನ್ನು ದುರಸ್ತಿಪಡಿಸಲು ಪ್ರತಿವಾದಿಗೆ ಸೂಕ್ತ ಆದೇಶವನ್ನು ಮಾಡುವಂತೆ ಕೋರಿ ವಾದ ಮಂಡಿಸಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಸಿವಿಲ್ ನ್ಯಾಯಾಲಯದ ಆದೇಶದ ಪ್ರತಿಯಲ್ಲಿ ಅಪೀಲುದಾರರ ತಂದೆ ಹೆಸರು ಚೆನ್ನಪ್ಪ ಪೂಜಾರಿ ಇದ್ದು, ಪ್ರತಿವಾದಿ ಮ್ಯುಟೇಷನ್ ಕ್ರಮ ಜರಗಿಸುವಾಗ ಡಾಟಾ ಎಂಟ್ರಿಯಲ್ಲಿ ಜಿನ್ನಪ್ಪ ಪೂಜಾರಿ ಎಂಬುದಾಗಿ ತಪಾವತು ಮಾಡಿರುತ್ತಾರೆ. ಇದನ್ನು ಸರಿಪಡಿಸುವುದು ಕಾನೂನು ಸಮ್ಮತವೆಂದು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಾಲೂಕು, ಮಾಲಾಡಿ ಗ್ರಾಮದ ನಂಬ್ರ MRH 65/2014-15, ದಿ: 30-12-2014ರ ಮ್ಯುಟೇಷನ್ ಆದೇಶವನ್ನು ರದ್ದುಗೊಳಿಸಿದೆ.

ಬೆಳ್ತಂಗಡಿ ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯದ ಒ.ಎಸ್. ನಂಬ್ರ 376/1999 , ದಿನಾಂಕ: 16-10-1999 ರ ಕೋರ್ಟ್ ಡಿಕ್ರಿ ಆದೇಶದಲ್ಲಿರುವಂತೆ, ಸಂಬಂಧಪಟ್ಟ ಪಹಣಿ ಪತ್ರಿಕೆಗಳಲ್ಲಿ ಅಪೀಲುದಾರರ ತಂದೆ ಹೆಸರು ಚೆನ್ನಪ್ಪ ಪೂಜಾರಿ ಎಂಬುದಾಗಿ ನಿಯಮಾನುಸಾರ ಪರಿಶೀಲಿಸಿಕೊಂಡು ದುರಸ್ತಿ ಮಾಡಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿ, , ಪರಿಷ್ಕರಿಸಿ ಈ ದಿನ ದಿನಾಂಕ: -10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು

ಪ್ರತಿ : ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಮನೋಹರ ಕುಮಾರ್ ಎ. ಬೆಳ್ತಂಗಡಿ ತಾಲೂಕು ಇವರ ಮುಖಾಂತರ ಜ್ಯಾರಿಗೆ

ಪ್ರತಿ : ತಹಶೀಲ್ದಾರರು , ಬೆಳ್ತಂಗಡಿ ತಾಲೂಕು ಇವರಿಗೆ ಆದೇಶದ ಅನುಪಾಲನೆಗಾಗಿ.